ಶ್ರೀ ಎಸ್. ಕೆ. ಕಾಂತ.—ಮಾನ್ಯ ಸದಸ್ಯರಿಗೆ ಗೊತ್ತಿದೆ ನೂರಕ್ಕಿಂತ ಕಡಿಮೆ ಇರತಕ್ಕಂತಹ ಕಾರ್ಖಾನೆಗಳನ್ನು ಬಂದ್ ಮಾಡತಕ್ಕಂಥಾದ್ದಾಗಲೀ, ಫ್ಯಾಕ್ಟರಿಯನ್ನು ಮುಚ್ಚತಕ್ಕಂಥಾದ್ದಾಗಲೀ ಅದಕ್ಕೆ ಕೇಂದ್ರ ಸರಕಾರದ ಒಂದು ನೀತಿ ಇದೆ, ಅವರದ್ದೇ ಆದ ಒಂದು ಆಕ್ಟ್ ಇದೆ. ಅದರ ಪ್ರಕಾರ ಮಾಡಬೇಕಾಗುತ್ತದೆ. ಆ ಫ್ಯಾಕ್ಟರಿಯನ್ನು ಬಂದ್ ಮಾಡತಕ್ಕಂಥಾದ್ದಕ್ಕೆ ಸರಕಾರ ಪರ್ಮಿಷನ್ ತೆಗೆದುಕೊಳ್ಳತಕ್ಕಂತಹ ಅವಶ್ಯಕತೆ ಅವರಿಗೆ ಇಲ್ಲ. ಇಲ್ಲಿ ನೌಕರರನ್ನು ರಿಟ್ರೆಂಚ್‌ಮೆಂಟ್ ಮಾಡಿದ್ದುದು ಇದೆ. ಇದನ್ನು ನಾನು ಕಾರ್ಮಿಕ ಇಲಾಖೆಯ ವತಿಯಿಂದ ಕೂಡಾ ಹೇಳಿದೆ. ಇದು ಒಂದು ಸರ್ಕಾರಿ ಸೌಮ್ಯದಲ್ಲಿರತಕ್ಕಂಥ ಫ್ಯಾಕ್ಟರಿ ಆಗಿರುವುದರಿಂದ ನಾನು ಮಾನ್ಯ ಅರಣ್ಯ ಮಂತ್ರಿಯವರನ್ನು ಕರೆಯಿಸಿ, ತಮ್ಮನ್ನೂ ಕೂಡಾ ಕರೆಯಿಸಿ ಇದರ ಬಗ್ಗೆ ಚರ್ಚೆ ಮಾಡುತ್ತೇನೆಂಬ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಆ ವಾದವನ್ನು ತೆಗೆದುಕೊಳ್ಳುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಲಿಲ್ಲ. ಈ ವಿಷಯ ಅರಣ್ಯ ಮಂತ್ರಿಯವರಿಗೂ ಕೂಡಾ ಸಂಬಂಧ ಇದೆ. ಆ ಫ್ಯಾಕ್ಟರಿಯ ಎಂಪ್ಲಾಯರ್ ಯಾರಿದ್ದಾರೆ ಅವರನ್ನೂ ಕೂಡಾ ಕರೆಯಿಸಿ ಈ ವಿಚಾರವನ್ನು ತೆಗೆದುಕೊಂಡು ತಮ್ಮನ್ನೂ ಕೂಡಾ ಕರೆಯಿಸಿ ಈ ವಿಷಯದಲ್ಲಿ ಚರ್ಚೆ ಮಾಡುತ್ತೇನೆ. ಐದನೇ ತಾರೀಖಿನ ದಿವಸ ಶಿವಮೊಗ್ಗದಲ್ಲಿ ಇದರ ಬಗ್ಗೆ ಏನಾಗುತ್ತದೆ, ಅದರ ಬಗ್ಗೆ ತಮ್ಮನ್ನೆಲ್ಲಾ ಕರೆಯಿಸಿ ಮಾತನಾಡುತ್ತೇನೆ.

ಅಧ್ಯಕ್ಷರು.—ಈಗ ಇನ್ನು ಳಿದ ಕಾಲಿಂಗ್ ಅಟೆನ್‌ಷನನ್ನು ನಾಳೆ ಇಡುತ್ತಿದ್ದೇನೆ. ಈಗ ಪ್ರಶ್ನೋತ್ತರ ಶುರುವಾಗುವ ವೆಂಕಟರಾವಯ್ಯನವರು, ಕೃಷ್ಣನ್‌ರವರು ಮತ್ತು ಯಡಿಯೂರಪ್ಪನವರು ಈಗ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸುವ ಸಲುವಾಗಿ ಏನಂ ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಏನು ಸಂಧಾನ ಮಾಡಬೇಕು ಎಂದು ಹೇಳಿದ್ದಾರೆ, ಆ ಬಗ್ಗೆ ಸರ್ಕಾರದ ವತಿಯಿಂದ ಜೆ.ಹೆಚ್. ಪಟೇಲರು ಕೂಡಾ ಹೇಳಿದ್ದಾರೆ. ನೀವು ಮೂರು ಜನರೂ ಬನ್ನಿ, ನನ್ನ ಛೇಂಬರಿನಲ್ಲಿ ಕುಳಿತು ಈ ಬಗ್ಗೆ ಸಂಧಾನವನ್ನು ಮಾಡಿ ಈ ಬಿಕ್ಕಟ್ಟು ಬಗೆಹರಿಸುವ ಸಲುವಾಗಿ ಏನು ಪ್ರಯತ್ನವನ್ನು ಮಾಡಬೇಕೋ ಆ ಪ್ರಯತ್ನವನ್ನು ಮಾಡೋಣ. ಈಗ ಸಭೆಯನ್ನು ಅರ್ಧ ಗಂಟೆ ಕಾಲದವರೆಗೆ ಮುಂದೂಡಿದ್ದೇನೆ.

(ಸಭೆಯು ೧೨—೪೧ಕ್ಕೆ ಮುಂದೂಡಲ್ಪಟ್ಟಿತು.)

(ಸದನವು ೩—೪೨ಕ್ಕೆ ಮತ್ತೆ ಸಮಾವೇಶಗೊಂಡಿತು. ಶ್ರೀ ಬಿ.ಜಿ. ಬಣಕಾರ್ ಅವರು ಪೀಠವನ್ನು ಅಲಂಕರಿಸಿದರು)

ನಿಯಮ ೩೩ಳಿರ ಮೇರೆಗೆ

ಅಧ್ಯಕ್ಷರು.—ಶ್ರೀ ಕೆ. ಕಂಠಾಲ್ ಗೈರುಹಾಜರಿ
ಶ್ರೀ ಕೆ. ಜಿ. ರಾಮಸ್ವಾಮಿ —''—

೧ ಬೈಲಹೊಂಗಲ ಮತ್ತು ಗೋಕಾಕ ನಗರಗಳಲ್ಲಿ ಕನ್ನಡ ಮತ್ತು ಉರ್ದು ಶಾಲೆಗಳ ಬಾಡಿಗೆಯನ್ನು ಕಳೆದ ೫—೬ವರ್ಷದಿಂದ ಸರ್ಕಾರದವರು ಕೊಡದಿರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮತ್ತು ಗೋಕಾಕ ನಗರದಲ್ಲಿ ಪ್ರಾಥಮಿಕ ಕನ್ನಡ ಮತ್ತು ಉರ್ದು ಶಾಲೆಗಳ ಬಾಡಿಗೆಯನ್ನು ಕಳೆದ ೫—೬ ವರ್ಷಗಳಿಂದ ಕೊಡದೆ ಇದ್ದ ಕಾರಣ ಆ ಶಾಲೆಯ ಬಿಲ್ಡಿಂಗ್ ಮಾಲೀಕರು ಶಾಲೆಯ ಬಿಲ್ಡಿಂಗನ್ನು ಬಿಡಬೇಕೆಂದು ಡಿ.ಡಿ.ಪಿ.ಐ. ಇವರಿಗೆ ಮೇಲಿಂದ ಮೇಲೆ ಪೀಡಿಸಿಕೊಳ್ಳುತ್ತಾ ಇರುತ್ತಾರೆ. ಹೀಗಾಗಿ ವಿದ್ಯಾರ್ಥಿಗಳ ಅಭ್ಯಾಸದ ಮೇಲೆ ದುಷ್ಪರಿಣಾಮ ಮತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರಲಿಕ್ಕೆ ಸಾಧ್ಯವಾಗಿದೆ. ಆದ ಕಾರಣ, ಕೂಡಲೇ ಶಾಲೆಗಳ ಬಾಡಿಗೆಯನ್ನು ಕೊಡಲು ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ಆದೇಶ ನೀಡಬೇಕು. ನಾನು ಈ ಬಗ್ಗೆ ಮಾನ್ಯ ಪ್ರಾಥಮಿಕ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಾನು ಈ ಪಿಳಿಳಿ ನ್ನು ತಡೆಯುತ್ತೇನೆ. ನಾವೇನೋ ಓದಬಹುದು. ಆ ಕಡೆಯವರು ಮಂತ್ರಿಯವರು ಯಾರು ಇಲ್ಲ ಮತ್ತು ಫ್ರಂಟ್ ಬೆಂಚ್‌ನಲ್ಲಿ ಯಾರು ಇಲ್ಲ.

ಅಧ್ಯಕ್ಷರು.—ಯಾರಾದರೂ ಮಿನಿಸ್ಟರ್ ಉತ್ತರ ಕೊಡುತ್ತಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

SRI M. S. KRISHNAN.—I will pass on ಎಂದು ಹೇಳುವುದಕ್ಕೆ ಬದಲಾಗಿ read and recorded.....ಎಂದು ಮಾಡಿಬಿಡಿ. We will adjourn and we will go,

ಅಧ್ಯಕ್ಷರು.—ಆಯಿತು ತಾವು ಕುಳಿತುಕೊಳ್ಳಿ. ಪಿಳಿಳಿಕ್ಕೆ ಉತ್ತರ ತರಿಸಿಕೊಟ್ಟರೆ ಆಯಿತಲ್ಲವೇ ಮಾನ್ಯ ಮಂತ್ರಿಗಳು ಉತ್ತರ ಹೇಳಿ.

ಶ್ರೀ ಜಿ. ಎಸ್. ಬಾಗಲ್‌ಕೋಟ್ (ಅರಣ್ಯ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಸಂಬಂಧಿಸಿದ ಮಂತ್ರಿಗಳಿಂದ ಅವರಿಗೆ ವಿವರವನ್ನು ತರಿಸಿಕೊಡುತ್ತೇನೆ.

2 Suicide by Sri Somanatha Student of Architecture U.V.C.E. Bangalore.

SRI R. VENKATARAMAIHA —The student of Architecture Mr. Somanath, University Visveswaraiah College of Engineering of Bangalore University has committed suicide because of the injustice and harassment done inawarding class marks to him. This has resulted in discontentment among the students of Jnana Bharati and UVCE. Even the Head of the Department of Architecture Mr. Kiran Shanker and 3 others has resigned. Sri R. C. Castalino is appointed as One Man Commission to enquire into the entire incident. Because of the delay in taking action the student community has been agitating to take action against the concerned. There was a big demonstration of students on 1-2-1988. What action the Government has taken in this regard?

SRI B. A. JIVIJAYA (Hon. Minister for Small Scale Industries) (On behalf of Hon. Minister for Higher Education).—

1 The Students of the Department of Architecture Bangalore University submitted the Memorandum to the Vice-Chancellor on 27-1-1988 and alleged that there was some harassment and injustice in awarding the Class Marks to the Students of the said Department which led to a desparate stage of committing a suicide by a Student. Immediately the Vice-Chancellor appointed Shri R. C. Castalino, Retired Dist. and Session Judge as one Man Enquiry Commission to investigate into the matter and furnish a report within 10 days.

2 Next on 28th Jan. 1988, the Students of Jnana Bharathi came in procession with the following demands :

1 To dismiss the Chairman of the Departmental Council in Architecture.

2 To institute an impartial enquiry